

# ಸ್ವಾತಂತ್ರ್ಯದ ಆರದ ಅಂತರ್ಜಲ

ಸ್ವಾತಂತ್ರ್ಯದ ಹಂಬಲ ಜಗತ್ತಿನ ಎಲ್ಲ ಜನರ ಮನದಾಳದ ಅಂತರ್ಜಲ. ಅದನ್ನು ಅಕ್ಷರಕ್ಕೆ ಹಾಯಿಸಿಕೊಳ್ಳದ, ಅದಕ್ಕೆ ಕುತ್ತು ಬಂದಾಗ ದನಿಯೆತ್ತದ ಸಾಹಿತ್ಯ ಯಾವುದಿದೆ ಹೇಳಿ!

ಸ್ವಾತಂತ್ರ್ಯಕ್ಕಾಗಿ ನಮ್ಮ ದೇಶದಲ್ಲಿ ನಡೆದ ಚಳವಳಿ, ಸಮಾಜವನ್ನೂ ಸಾಹಿತ್ಯವನ್ನೂ ಪ್ರಭಾವಿಸಿದ ರೀತಿ ಅನನ್ಯ. ಚಳವಳಿಯ ಆಶಯ, ಆದರ್ಶಗಳೆಲ್ಲ ಅಕ್ಷರಲೋಕಕ್ಕೆ ಧಾವಿಸಿ ಬಂದವು. ಕನ್ನಡ ಸಾಹಿತ್ಯದಲ್ಲಿ ಕೂಡ ಈ ಅರ್ಥಪೂರ್ಣ ಪ್ರಭಾತಫೇರಿ ನಡೆಯಿತು. ನವೋದಯ ಕಾವ್ಯದ ಪ್ರಮುಖ ಪ್ರೇರಣೆಗಳಲ್ಲಿ ದೇಶಪ್ರೇಮವೂ ಒಂದಾಯಿತು. 'ತೂಕಡಿಕೆಯನು ಕಳೆಯದೇಕೆ ಕುಳಿತಿಹೆ ಗೆಳೆಯಾ?' ಎಂದು ದೊಡ್ಡದನಿಯಲ್ಲಿ ಕೇಳಿತು.

ಆಗ ವಿಸ್ತರಿಸುತ್ತಿದ್ದ ಗದ್ಯ ಸಾಹಿತ್ಯ ಇದಕ್ಕೆ ಇನ್ನಷ್ಟು ವಿಶಾಲ ಭೂಮಿಕೆಯನ್ನು ಒದಗಿಸಿತು. ಅನೇಕ ಕಥೆಗಳು, ಕಾದಂಬರಿಗಳಿಗೆ ಸ್ವಾತಂತ್ರ್ಯ ಚಳವಳಿಯ ಕಥೆಗಳೇ ವಸ್ತುವಾಗಿವೆ. ಕನ್ನಡದ ಹಲವು ಪ್ರಸಿದ್ಧ ಕಾದಂಬರಿಗಳು ಈ ಚಳವಳಿಯ ಕೂಸುಗಳೇ ಎನ್ನುವುದು ಬಹಳ ಮುಖ್ಯ. ಈ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಅದರ ಒಂದು ಪಕ್ಷಿ ನೋಟ ಈ ಸಂಚಿಕೆಯಲ್ಲಿದೆ.

ಎಲ್ಲ ನೃತ್ಯ ಕಲಾವಿದರ ಮನದಲ್ಲಿರುವ ಕೃಷ್ಣಬಿಂಬ ಒಂದೇ ಎಂಬುದಕ್ಕೂ ನಿಮ್ಮ ನೆಚ್ಚಿನ ಸಾಂಸ್ಕೃತಿಕ ಮಾಸ ಪತ್ರಿಕೆ ಕನ್ನಡಿ ಹಿಡಿದಿದೆ. ಹಾಗೆಯೇ ಆಗಸ್ಟ್ ತಿಂಗಳ ದಿನಗಳು ಬರಿ ದಿನಗಳಲ್ಲ, ಮಳೆಯ ಹನಿಗಳು. ಅದಕ್ಕೆ 'ಮಯೂರ' ಅಲ್ಲದೆ ಇನ್ನಾರು ಸಂಭ್ರಮಿಸುತ್ತಾರೆ!

–ಆರ್. ಪೂರ್ಣಿಮಾ